CC 85/2023
PW-1

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು. ದಿನಾಂಕಃ 12.09.2025.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ</u>**

ನನ್ನ ಗಂಡ ಸುಮಾರು 10 ವರ್ಷಗಳಿಂದ ನನ್ನ ಜೊತೆ ಇಲ್ಲ. ನಾನು ಚನ್ನಗಿರಿಯ ಖಾಯಂ ವಾಸಿ ಅಲ್ಲ ಎಂದರೆ ಸರಿ. ನಾನು 20 ವರ್ಷಗಳ ಹಿಂದೆ ಚನ್ನಗಿರಿಯಲ್ಲಿ ಬಂದು ವಾಸವಿರುತ್ತೇನೆ. ಚನ್ನಗಿರಿಯಲ್ಲಿ ನನಗೆ ಆದಾಯ ಬರುವ ಯಾವುದೇ ಆಸ್ತಿ ಇಲ್ಲ. ಆರೋಪಿಯು ನನಗೆ ನನ್ನ ಜ್ಯೋತಿ ಕೋರಿ ಎನ್ನುವ ಫ್ರೆಂಡ್ ಮೂಲಕ ಅವರ ಮನೆಯಲ್ಲಿ ಪರಿಚಯ ಆಗಿರುತ್ತಾರೆ. ಗಣಪತಿ ಸರ್ಕಲ್ ನಲ್ಲಿ ಜ್ಯೋತಿರವರ ಮನೆ ಇರುತ್ತದೆ. ಜ್ಯೋತಿ ರವರು ಮನೆಯಲ್ಲಿಯೇ ಇರುತ್ತಾರೆ. ಆರೋಪಿಯನ್ನು ಜ್ಯೋತಿಯವರ ಮನೆಗೆ ನಾನು ಕರೆಸಿಲ್ಲ. ನಾನು ಜ್ಯೋತಿರವರ ಮನೆಗೆ ಹೋಗಿ ಬಂದು ಮಾಡುತ್ತಿದ್ದರಿಂದ ಆ ಮೂಲಕ ನನಗೆ ಆರೋಪಿ ಪರಿಚಯ ಆಗಿರುತ್ತಾರೆ. ಆರೋಪಿಯು ಚನ್ನಗಿರಿಯವರು ಇದ್ದು ಮರಳು ವ್ಯಾಪಾರ ಮಾಡುತ್ತಾರೆ. ಆರೋಪಿಯು ಮರಳನ್ನು ಎಲ್ಲಿಂದ ತಂದು ಎಲ್ಲಿ ವ್ಯಾಪಾರ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. ಆರೋಪಿಯು ಯಾವುದೇ ಮರಳು ವ್ಯಾಪಾರ ಮಾಡುವುದಿಲ್ಲ ಅವರು ಬಸ್ ಚಾಲಕ ಇರುತ್ತಾರೆ ಎಂದರೆ ಸಾಕ್ಷಿಯು ಆರೋಪಿಯು ನಮ್ಮ ಬಳಿ ಮರಳು ವ್ಯಾಪಾರ ಮಾಡುವುದಾಗಿ ಹೇಳಿದ್ದರು ಎಂದು ನುಡಿಯುತ್ತಾರೆ. ಆರೋಪಿಯು ನನ್ನ ಬಳಿ ಹಣ ಕೇಳುವಾಗ ಮರಳು ವ್ಯಾಪಾರ ಮಾಡುವುದಾಗಿ ಹೇಳಿದ್ದರು. ಆರೋಪಿಯು ಜನವರಿ-2022 ರ ಮೊದಲ ವಾರದಲ್ಲಿ ನನಗೆ ಹಣ ಕೇಳಿದ್ದು ನಾನು ದಿನಾಂಕ 10.01.2022 ರಲ್ಲಿ ಅವರಿಗೆ ಹಣ ಕೊಟ್ಟಿರುತ್ತೇನೆ. ಆರೋಪಿಯು ಜನವರಿ ಮೊದಲ ವಾರ ಎಂದರೆ 1 ಅಥವಾ 2 ನೇ ತಾರೀಖಿನಂದು ಇರಬಹುದು. ಆರೋಪಿಯು ಹಣ ಕೇಳಲು ಒಬ್ಬರೇ ಬಂದಿದ್ದರು. ಆರೋಪಿಗೆ ಹಣ ಕೊಡುವಾಗ ಅವರು ಮರಳು ವ್ಯಾಪಾರ ಮಾಡುವುದಾಗಿ ಹೇಳಿ 3 ತಿಂಗಳ ಒಳಗೆ ಹಣ ಮರುಪಾವತಿ ಮಾಡುವುದಾಗಿ ಹೇಳಿದ್ದರು. ಹಾಗಾಗಿ ನಾನು ಅವರಿಗೆ ಹಣ ಕೊಟ್ಟಿರುತ್ತೇನೆ. ನನ್ನ ಗಂಡ ಸಹ ಚಾಲಕ ಎಂದರೆ ಸರಿ. ಆರೋಪಿ ಮತ್ತು ನನ್ನ ಗಂಡ ಇಬ್ಬರು ಚಾಲಕರು ಇರುವ ಕಾರಣ ಅವರ ಮಧ್ಯೆ ಒಳ್ಳೆಯ ಸಂಬಂಧ ಇತ್ತು ಎಂದರೆ ಸರಿಯಲ್ಲ. ನಿಪಿ.1 ರಲ್ಲಿ ಮೊದಲು ಆರೋಪಿಯ ಸಹಿಯಾಗಲಿ ಅಥವಾ ಯಾವುದೇ ಬರವಣಿಗೆಯಾಗಲಿ ಇರಲಿಲ್ಲ ಎಂದರೆ ಸರಿಯಲ್ಲ. ಪ್ರಶ್ನಿತ ಚೆಕ್ಕನ್ನು ನಾನೇ ಭರ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿಯ ಸಹಿಯನ್ನು ಸಹ ನಾನೇ ನಕಲಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 10.01.2022 ರಲ್ಲಿ ನನ್ನ ಬಳಿ 3 ಲಕ್ಷ ಹಣ ಇತ್ತು ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಬ್ಯಾಂಕ್ ಸ್ಟೇಟ್ ಮೆಂಟ್ ಹಾಜರುಪಡಿಸಿದ್ದೇನೆ. ನಾನು ಹಾಜರುಪಡಿಸಿದ ನಿಶಾನೆಕರಿಸಿಕೊಂಡಿರುವ ದಾಖಲೆಗಳಲ್ಲಿ ನನ್ನ ಬ್ಯಾಂಕ್ ಸ್ಟೇಟ್ ಮೆಂಟ್ ಇಲ್ಲ ಎಂದರೆ ಸರಿ. ನಮ ವಕೀಲರ ಮೂಲಕ ಆರೋಪಿಗೆ ನೋಟೀಸು ಕಳುಹಿಸಿದ ನಂತರ ಅವರು ಮರು ಉತ್ತರ ನೀಡಿರುತ್ತಾರೆ ಎಂದರೆ ಸರಿ. ಆರೋಪಿಯು ನೀಡಿದ ಮರುಉತ್ತರವನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಆರೋಪಿಯು ತನ್ನ ಮರು ಉತ್ತರದಲ್ಲಿ ಚೆಕ್ಕಿನಲ್ಲಿರುವ ಸಹಿ ತನ್ನದು ಅಲ್ಲ ಎಂದು

ಹೇಳಿರುತ್ತಾರೆ. ಆರೋಪಿಯು ನೀಡಿದ ಮರು ಉತ್ತರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೋ ಇಲ್ಲವೋ ಗೊತ್ತಿಲ್ಲ. ಈಗ ತೋರಿಸಿದ ದಾಖಲೆ ನಮ್ಮ ವಕೀಲರ ಮೂಲಕ ಆರೋಪಿಗೆ ಕಳುಹಿಸಿದ ನೋಟೀಸ್ ಎಂದರೆ ಸರಿ. ಸದರಿ ನೋಟೀಸನ್ನು ನಿಡಿ.1 ಎಂದು ಗುರುತಿಸಲಾಯಿತು. ನಿಡಿ.1 ರಲ್ಲಿ ನನ್ನ ಅಥವಾ ನಮ್ಮ ವಕೀಲರ ಸಹಿ ಇಲ್ಲ ಎಂದರೆ ಸರಿ. ನಿಪಿ.5 ರಲ್ಲಿ ಹೇಳಿರುವ ವಿಳಾಸ ಮತ್ತು ದೂರಿನಲ್ಲಿ ಹೇಳಿರುವ ವಿಳಾಸ ಬೇರೆ ಬೇರೆ ಇರುವ ಬಗ್ಗೆ ನನಗೆ ಗೊತ್ತಿಲ್ಲ. ನಿಪಿ.5 ರಲ್ಲಿ ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.5 ರಲ್ಲಿ ಅವಿನಾಶ್ ಎಂದು ಇರುತ್ತದೆ. ನಿಪಿ.1 ಮತ್ತು ನಿಪಿ.5 ರಲ್ಲಿಯು ಸಹ ಅವಿನಾಶ್ ಎಂದು ಇರುತ್ತದೆ. ನಿಪಿ.1 ರಲ್ಲಿ ಅವಿನಾಶ್ ಎನ್ನುವ ಮುಂದೆ ಎಂ ಇರುತ್ತದೆ ಎಂದರೆ ಸರಿ. ನಿಪಿ.1 ರಲ್ಲಿರುವ ಸಹಿ ಆರೋಪಿಯ ಸಹಿ ಅಲ್ಲ ಎಂದರೆ ಸರಿಯಲ್ಲ. ನಿಪಿ.1 ರಲ್ಲಿರುವಂತೆ ಆರೋಪಿಯು ಸಹಿ ಮಾಡುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ಗಂಡನ ನಡುವೆ ಒಳ್ಳೆಯ ಸಂಬಂಧ ಇರುವಾಗ ಆರೋಪಿಯು ನನ್ನ ಗಂಡನಿಗೆ ಕೊಟ್ಟ ಖಾಲಿ ಚೆಕ್ಕನ್ನು ನಾನು ತೆಗೆದುಕೊಂಡು ಅದರಲ್ಲಿ ಸಹಿ ಮತ್ತು ಉಳಿದ ಬರವಣಿಗೆಯನ್ನು ಭರ್ತಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ನನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಆಗಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನಾನು ಯಾವುದೇ ಹಣವನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ನನಗೆ ಅಷ್ಟು ಹಣವನ್ನು ಕೊಡುವಷ್ಟು ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಹೋದ ನಂತರ ನಾನು ನನ್ನ ಜೀವನಕ್ಕೆ ಟೈಲರಿಂಗ್ ಕೆಲಸ ಮಾಡಿಕೊಂಡಿರುತ್ತೇನೆ ಎಂದರೆ ಸಾಕ್ಷಿಯು ಬಟ್ಟೆ ಅಂಗಡಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ಟೈಲರ್ ಕೆಲಸದಿಂದ ನನ್ನ ಜೀವನ ನಿರ್ವಹಣೆ ಮಾಡಿ ಬೇರೆಯವರಿಗೆ ಸಾಲ ಕೊಡುವಷ್ಟು ಹಣ ನನ್ನ ಬಳಿ ಇಲ್ಲ ಎಂದರೆ ಸಾಕ್ಷಿಯು ಬಟ್ಟೆ ಅಂಗಡಿ ಇರುತ್ತದೆ ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ಬಟ್ಟೆ ಅಂಗಡಿಯ ಬಗ್ಗೆ ಹೇಳಿಲ್ಲ ಎಂದರೆ ಸರಿ. ನನ್ನ ದೂರಿನಲ್ಲಿ ಟೈಲರ್ ಎಂದು ಬರೆದಿರುವುದು ಸರಿ ಇರುತ್ತದೆ. ನಿಪಿ.4 ರಲ್ಲಿಯು ಸಹ ಟೈಲರ್ ಎಂದು ಬರೆದಿರುತ್ತೇನೆ ಎಂದರೆ ಸರಿ. ಆರೋಪಿಯು ನನ್ನ ಗಂಡನಿಗೆ ಕೊಟ್ಟ ಚೆಕ್ಕನ್ನು ನಾನು ದುರುಪಯೋಗ ಮಾಡಿಕೊಂಡು ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿಯು ನನಗೆ ಯಾವುದೇ ಹಣ ಕೊಡುವುದು ಬಾಕಿ ಇಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿರುವೆ ಎಂದರೆ ಸರಿಯಲ್ಲ. ನಿಪಿ.1 ಚೆಕ್ಕನ್ನು ನನ್ನ ಬಳಿ ಇದ್ದಾಗ ಮಳೆ ಬಂದು ಹನಿ ಬಿದ್ದಿದ್ದರಿಂದ ಚೆಕ್ಕಿನಲ್ಲಿರುವ ಶಾಹಿಯು ಅಳಿಸಿರುತ್ತದೆ. ಸದರಿ ವಿಷಯವನ್ನು ನಿಪಿ.4 ರಲ್ಲಿ ಹೇಳಿಲ್ಲ. ನಿಪಿ.1 ರಲ್ಲಿ ಸಹಿಯಲ್ಲಿ ಮತ್ತು ಬರವಣಿಗೆಯಲ್ಲಿ ವ್ಯತ್ಯಾಸ ಮಾಡುವ ಉದ್ದೇಶದಿಂದ ಶಾಹಿ ಅಳಿಸಿರುವಂತೆ ನಾನೇ ಮಾಡಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿಯು ಪ್ರಶ್ನಿತ ಚೆಕ್ಕಿನಲ್ಲಿ ಹೇಳಿರುವ ಹಣವನ್ನು ಪಾವತಿಸಲು ಬಾಧ್ಯಸ್ಥರು ಅಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

CC 85/2023
PW-1

**ಓ ಹೇ ಕೇ ಸ ಇ ಒ**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ.ಚನ್ನಗಿರಿ.**